**ಕವಿತೆ**





**ಲಕ್ಷ್ಮಣ ವಿ.ಎ.**

ಕಲೆ: ವೀರೇಶ ರುದ್ರಸ್ವಾಮಿ

# ಹಾಡು ಮುಗಿದ ಮೇಲೆ

ಈಗಷ್ಟೇ ಗಂಧರ್ವ ಗಾನ ಮುಗಿಸಿ
ವೇದಿಕೆಯಿಂದ ಕೆಳಗಿಳಿದ ಗಾಯಕಿಯ
ಅನುರಣಿಸುವ ಮೃದಂಗದ ಹಾಗೆ
ಇದೆ ಅವಳ ಎದೆ ಬಡಿತ ಇನ್ನೂ.

ದಿವ್ಯ ತನ್ಮಯತೆಯಲಿ ಕಣ್ಣು
ಮುಚ್ಚಿ ಕಣ್ಣು ತೆರೆದವೇಗಳಲಿ
ತೆಳು ಜೇನ ಸವರಿದ ಸ್ವರ ಪರಿಮಳ
ಎಳೆದು ಕಟ್ಟಿದ ಹೆರಳುಗಳಲಿ
ಉರಿದು ಆರಿದ ದೀಪದ ಸೊಡರ ಘಮ.

ಅರೆ ಬಿರಿದ ತುಟಿಯ ಮೇಲೆ ಚಡಪಡಿಕೆಯ
ಪದ ಪಲ್ಲವಿ ಕಂಪನ
ಹೊರ ಬರಲು ಹವಣಿಸುವ ರಾಗದ ಎಳೆ
ಎಳೆದು ಇನ್ನೇನು ಕೊನೆಯುಸಿರು ಹಾರಿ ಹೋಗುವ
ಪ್ರಾಣ ಪಕ್ಷಿಯ ಚೀತ್ಕಾರ

ಎತ್ತಿ ಮುಚ್ಚಿಟ್ಟ ವೀಣೆಯಲಿನ್ನೂ ಮಿಡಿವ
ಬೆರಳ ನುಡಿ ಕಂಪನ
ಸೊಕ್ಕಿ ಇಳಿದ ನದಿ
ಅಳು ನಿಂತರೂ ನಿಲ್ಲದ ಮಗುವಿನ ಬಿಕ್ಕು
ಏರಿಳಿದ ಕೊರಳುಬ್ಬು
ಧಮನಿಗಳಲಿ ಕರುಣ ರಸ ಸ್ವರ ಸಂಚಯ.

ಕೆಲ ಕ್ಷಣದ ಹಿಂದೆ
ಭವದ ತೊಟ್ಟಿಲಿನಲಿ ಅನುಭಾವದ ಲಾಲಿ ತೂಗಿಸಿಕೊಂಡು
ಸುರ ಸುಖದ ಯೋಗ ಮುದ್ರೆಯ
ನಿದ್ರೆಗೆ ಜಾರಿದ
ಶ್ರೋತೃಗಳು ಈಗ ಕನಸಿನಲಿ ನಡೆದವರಂತೆ
ದಿಕ್ಕು ತಪ್ಪಿದ್ದಾರೆ

ಮನಸಿಲ್ಲದ ಮನಸಿನಿಂದ
ಮತ್ತದೇ ಕಿರುಗುಡುವ ಲೌಕಿಕದ ಸದ್ದಿಗೆ
ತಪ್ತ ಇಂದ್ರಿಯಗಳನೊಪ್ಪಿಸಿ.

ನೂರು ಸ್ವರಗಳ ಹೆತ್ತ
ಮಹಾತಾಯಿ ಎಷ್ಟೊಂದು ಹಗುರ
ತೇಲುತ್ತಿದ್ದಾಳೆ ಆಹ!

ಹೆರದ ಸ್ವರಗಳನು ಎದೆಯೊಳಗೆ
ಉಳಿಸಿಕೊಂಡು ಉರಿ ಉರಿಯುತ್ತ
ನಡೆದೆ ಹೊರಟಳು ನೋಡಿ ಬಾಗಿ ಬಳಕುವ
ತೆರೆಗಳ ಮೇಲೆ
ಹಣತೆ ತೇಲಿ ತೂಗುವ ಹಾಗೆ.

